# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.531-2018 ಪಿ . ಡಬ್ಲ್ಯುಃ 3**

| | |
|---|---|
| ಸಾಕ್ಷಿದಾರರ ಹೆಸರು | ಸಿದ್ಧಯ್ಯ |
| ವಾಸ್ತವ್ಯ | ಸಿಂಧುವಳ್ಳಿಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 19-07-2024. |

**ಪಾಟೀ ಸವಾಲುಃ ಪ್ರತಿವಾದಿ ಶ್ರೀ ಆರ್.ಎಂ.ಎಸ್ ವಕೀಲರಿಂದಃ**

ವಾದಿ ನಮ್ಮ ಸಂಬಂಧಿ ಇಲ್ಲ, ಆದರೆ ನಮ್ಮ ಊರಿನವರು. ವಾದಿಯವರೇ ಬೇರೆ ಬೀದಿ, ನಾನೇ ಬೇರೆ ಬೀದಿ ಎಂದರೆ ಸರಿ. ಗಲಾಟೆ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ. ಆದರೆ ವಾದಿಯವರು ನನ್ನ ಬಳಿ ಹೇಳಿರುತ್ತಾರೆ. ವಾದಿ ಹೇಳಿದ್ದರಿಂದ ನನಗೆ ಗಲಾಟೆ ವಿಚಾರ ಗೊತ್ತಾಗಿರುತ್ತದೆ ಎಂದರೆ ಸರಿ. ನಾನು ಊರಿನ ಮುಖಂಡನಾಗಿರುತ್ತೇನೆ ಎಂದರೆ ಸರಿ. 1 ನೇ ವಾದಿಯು ಆಕೆಯ ಗಂಡ ತನ್ನೊಂದಿಗೆ ಗಲಾಟೆ ಮಾಡುತ್ತಿದ್ದಾರೆ ಎಂದು ನಮಗೆ ಬಂದು ಹೇಳಿದಾಗ ನಾವು 3-4 ಭಾರಿ ಪಂಚಾಯ್ತಿ ಮಾಡಿ 1 ನೇ ಪ್ರತಿವಾದಿಗೆ ಬಾಳ್ವೆ ಮಾಡುವಂತೆ ಬುದ್ಧಿವಾದ ಹೇಳಿರುತ್ತೇವೆ. ನಾನು ಅಣ್ಣಯ್ಯಸ್ವಾಮಿ ಮತ್ತು ಇನ್ನೂ 4-5 ಜನ ಊರಿನ ಮುಖಂಡರು 1 ನೇ ಪ್ರತಿವಾದಿಗೆ ಬುದ್ಧಿವಾದ ಹೇಳಿರುತ್ತೇವೆ. ನಾನು ಹೇಳುವಂತೆ ವಾದಿ ನನ್ನ ಬಳಿ ಬಂದು ಆಕೆಯ ಗಂಡ ಜಗಳ ಮಾಡಿದ ಸಂಬಂಧ ನನ್ನ ಬಳಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪಂಚಾಯ್ತಿಯಲ್ಲಿ ವಾದಿಗೆ ಗಂಡನ ಮನೆಗೆ ಹೋಗಿ ಬಾಳ್ವೆಮಾಡುವಂತೆ ಬುದ್ಧಿವಾದ ಹೇಳಿದ್ದರೂ ವಾದಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯೇ ಸ್ವಇಚ್ಛೆಯಿಂದ ಗಂಡನ ಮನೆ ಬಿಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯ ತಂದೆ ಒಂದೇ ರಾಜಕೀಯ ಪಕ್ಷದ ಮುಖಂಡರಾಗಿರುವುದರಿಂದ ಅವರ ಮಗಳಿಗೆ ಸಹಾಯ ಮಾಡುವ ಉದ್ದೇಶದಿಂದ

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೆಲ್ಲ ಗ್ರಾಮಸ್ಥರು ಬುದ್ಧಿವಾದ ಹೇಳಿದರೂ ವಾದಿಯ ಗಂಡ ಆತನ ನಡುವಳಿಕೆಯನ್ನು ಬದಲಾಯಿಸಿ ಕೊಂಡಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**